**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ**

**OS**-444/2022 **PW**-1

**ದಿಃ 29.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ 2 ಮತ್ತು 3 ರವರ ಪರ ಶ್ರೀ ಎ ಆರ್ ಎ ವಕೀಲರಿಂದಃ**

ನನ್ನ ಮನೆಯವರು ಬೆಂಗಳೂರಲ್ಲಿ ಸೆಮಿ ಸಿಲ್ಕ ಸೀರೆಗಳನ್ನು ಅಂಗಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಅಂಗಡಿಯನ್ನು ಲುಕ್ಸಾನವಾದ ಕಾರಣ ನಾವು ಮುಚ್ಚಿರುತ್ತೇವೆಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಯಾವ ಕಾರಣಕ್ಕೆ ಅಂಗಡಿಯನ್ನು ಮುಚ್ಚಿದ್ದಾರೆಂದು ಹೇಳಲು ಆಗುತ್ತದೆಯಾ ಎಂದೆರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಅವರು ನನಗೇನೂ ಹೇಳಿಲ್ಲ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ನಮ್ಮ ಮದುವೆಗಿಂತ ಮೊದಲೇ ಆ ಅಂಗಡಿ ಮುಚ್ಚಿತ್ತು ಎನ್ನುತ್ತಾರೆ. ಸದರಿ ಅಂಗಡಿ ಮುಚ್ಚಿದ ನಂತರ ನನ್ನ ಗಂಡ ಹನುಮಾನ ಪ್ಲಾಯವುಡ ಎಂಬ ಅಂಗಡಿ ಇಟ್ಟರು ಎಂದರೆ ಸರಿ. ಸದರಿ ಅಂಗಡಿ ಪ್ರಾರಂಬ ಮಾಡಲು ನನ್ನ ಅಣ್ಣಂದಿರು ನನ್ನ ಯಜಮಾನರು ಸಹಾಯ ಮಾಡಿರುತ್ತಾರೇಂದರೆ ಸಾಕ್ಷಿ ಮಾಡಿಲ್ಲ ಎನ್ನುತ್ತಾರೆ. ಸದರಿ ಹನುಮಾನ ಪ್ಲಾಯವುಡ ಅಂಗಡಿ ಇದು ಕೂಡಾ ನಷ್ಟದಲ್ಲಿ ಮುಚ್ಚಿ ಹೋಯಿತು ಎಂದರೆ ಸಾಕ್ಷಿ ಕೊರೋನಾ ಸಮಯದಲ್ಲಿ ತೊಂದರೆಯಾಗಿ ಅದನ್ನು ಮುಚ್ಚಿರುತ್ತೇವೆ ಎನ್ನುತ್ತಾರೆ. ಸದರಿ ಹನುಮಾನ ಪ್ಲಾಯವುಡ ಅಂಗಡಿಯನ್ನು ಮುಚ್ಚಿದಾಗ ನಮ್ಮ ಯಜಮಾನರ ಮನೆತನದಲ್ಲಿ ಹಣದ ತೊಂದರೆ ಇತ್ತು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನನ್ನ ಯಜಮಾನರ ಆರ್ಥಿಕ ಪರಿಸ್ದಿತಿ ಸರಿ ಇರಲಿಲ್ಲ ಎಂದರೆ ಸಾಕ್ಷಿ ಸರಿ ಇತ್ತು ಯಾವದೇ ತೊಂದರೆ ಇರಲಿಲ್ಲ ಎನ್ನುತ್ತಾರೆ. ಆರ್ಥಿಕ ಪರಿಸ್ದಿತಿ ಸರಿ ಇರಲಿಲ್ಲ ಎಂಬ ಕಾರಣಕ್ಕೆ ನನ್ನ ಮತ್ತು ನನ್ನ ಯಜಮಾನರ ನಡುವೆ ತಕರಾರುಗಳು ಪ್ರಾರಂಬವಾದವು ಎಂದರೆ ಅದು ಸರಿಯಲ್ಲ. ಈ ಸಂಬಂದ ನನ್ನ ಬೆಂಗಳೂರಿನ ಪೊಲೀಸ ಕಮೀಶನರ ಮುಂದೆ ಒಂದು ಖಾಸಗಿ ದೂರನ್ನು ದಾಖಲಿಸಿದ್ದೆ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಸಮಯದಲ್ಲಿ ಇಬ್ಬರು ಅಣ್ಣಂದಿರು ಬಂದು ನಮ್ಮಿಬ್ಬರ ನಡುವೆ ರಾಜೀ ಮಾಡಿಸಿ ನಮ್ಮನ್ನು ಕೂಡಿಸಿ ಹಣದ ಸಹಾಯ ಮಾಡಿ ಹೋದರೆಂದರೆ ಸಾಕ್ಷಿ ಅವರು ಏನೂ ಮಾಡಿಲ್ಲ ಎಂದು ನುಡಿಯುತ್ತಾರೆ.

ಆ ರೀತಿ ಸಹಾಯ ಮಾಡಿದ ನಂತರ ನಾನು ನನ್ನ ಯಜಮಾನರ ಜೊತೆ ಜಗಳ ಮಾಡಿಕೊಂಡು ಹುಬ್ಬಳ್ಳಿಗೆ ಬಂದಿದ್ದೆ ಎಂದರೆ ಸರಿಯಲ್ಲ ಎನ್ನುತ್ತಾರೆ. ಹುಬ್ಬಳ್ಳಿಗೆ ಬಂದ ನಂತರ ನಾನು ಕೌಟುಂಬಿಕ ನ್ಯಾಯಾಲಯದಲ್ಲಿ ನನ್ನ ಗಂಡನ ವಿರುದ್ದ ಒಂದು ಪ್ರಕರಣ ದಾಖಲಿಸಿದೆ ಎಂದರೆ ಸಾಕ್ಷಿ ಅದೆಲ್ಲಾ ಸುಳ್ಳು ಎನ್ನುತ್ತಾರೆ. ನಂತರ ನಾನು ನನ್ನ ಗಂಡನ ವಿರುದ್ದ ವಿಚ್ಚೇದನದ ಕೇಸು ದಾಖಲಿಸಿದ್ದೆ ಎಂದರೆ ಸಾಕ್ಷಿ ಅವರೇ ಹಾಕಿದ್ದರು ಆದರೆ ವಿಚ್ಚೇದನ ಆಗಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ಮಾನ್ಯ ನ್ಯಾಯಾಲಯದವರು ವಿವಾಹ ವಿಚ್ಚೇದನವನ್ನು ನಮಗೆ ಮಂಜೂರು ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ಮಾಡಿಲ್ಲ ಎಂದು ನುಡಿಯುತ್ತಾರೆ. ವಿಚ್ಚೇದನ ಆದ ನಂತರ ಮತ್ತೇ ನನ್ನ ಅಣ್ಣಂದಿರು ನನ್ನ ತಾಯಿ ಹಾಗೂ ಮೋಹನ ಮೇಹರವಾಡೆ ಇವರೆಲ್ಲರೂ ಸೇರಿ ಮತ್ತೇ ನನ್ನ ಯಜಮಾನರ ಜೊತೆ ದುರ್ಗಾದೇವಿ ದೇವಸ್ಥಾನ ಹುಬ್ಬಳ್ಳಿಯಲ್ಲಿ ಮರುಮದುವೆ ಮಾಡಿದರು ಎಂದರೆ ಸಾಕ್ಷಿ ಅದು ಮೊದಲೇ ಆಗಿತ್ತು ಎಂದರೆ 2008 ರಲ್ಲಿ ಆಗಿತ್ತು ಎಂದರೆ ಸಾಕ್ಷಿ ನುಡಿಯುತ್ತಾರೆ. ಮರುಮದುವೆಯಾದ ನಂತರ ರೇವಣಕರ ಕಂಫರ್ಟ್ಸ್ ಎಂಬಲ್ಲಿ ಅತೀ ವಿಜೃಂಬಣೆಯಿಂದ ರಿಸೆಪ್ಸನ ಆಯಿತು ಎಂದರೆ ಸಾಕ್ಷಿ ಸಿಂಪಲ್ಲ ಆಗಿ ಆಯಿತು ಎನ್ನುತ್ತಾರೆ. ಸದರಿ ಕಾರ್ಯಕ್ರಮಕ್ಕೆ 1000 ರಿಂದ 1500 ದಷ್ಟು ಜನ ಬಂದಿದ್ದರು ಎಂದರೆ ಸಾಕ್ಷಿ 80 ರಿಂದ 100 ಮಂದಿ ಬಂದಿದ್ದರು ಎನ್ನುತ್ತಾರೆ. ಆ ಸಮಯದಲ್ಲಿ ನನ್ನ ಇಬ್ಬರು ಅಣ್ಣಂದಿರು ಹಾಗೂ ನನ್ನ ತಾಯಿ ಸೇರಿ ಒಂದು ಲಾಂಗ ನೆಕ್ಲೇಸ ಕೊಟ್ಟಿದ್ದರೆಂದರೆ ಸಾಕ್ಷಿ ಅದು ನಮ್ಮ ತಂದೆ ಬಂಗಾರ ಮಾಡಿ ಇಟ್ಟಿದ್ದನ್ನು ನನಗೆ ಮಾಡಿಕೊಟ್ಟಿದ್ದರು ಎನ್ನುತ್ತಾರೆ. ಅದೇ ರೀತಿ ನನ್ನ ಮನೆಯವರಿಗೆ ಒಂದು ತೊಲೆ ಸುತ್ತುಂಗುರ ಹಾಗೂ 20 ಗ್ರಾಂ ನ ಚೈನು ಕೊಟ್ಟಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸದರಿ ನನ್ನ ನಕ್ಲೇಸ, ಸುತ್ತುಂಗುರ ಮತ್ತು ಚೈನ ಸೇರಿ ಸುಮಾರು 7 ರಿಂದ 8 ತೊಲ ಬಂಗಾರ ಆಗಿತ್ತು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ರಿಸೆಪ್ಸನ ಖರ್ಚು ಹಾಗೂ ಬಂಗಾರದ ಖರ್ಚನ್ನು ನನ್ನ ಅಣ್ಣಂದಿರೇ ನೋಡಿಕೊಂಡಿರುತ್ತಾರೆಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಮರುಮದುವೆಯಾದ ನಂತರ ಬೆಂಗಳೂರಿನಲ್ಲಿ ವಾಸ ಮಾಡುತ್ತೇವೆಂದರೆ ಸರಿ. ಅಲ್ಲಿ ನನ್ನ ಮನೆಯವರು ಕ್ರೆಡಿಟ ಕಾರ್ಡ ಉಪಯೋಗಿಸಿ ಸುಮಾರು 25 ಲಕ್ಷ ದಷ್ಟು ಸಾಲ ಮಾಡಿದ್ದರು ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಆ ಸಾಲ ಆದ ನಂತರ ನಾವು ಸ್ವಲ್ಪ ದಿವಸ ದಾವಣಗೇರಿಯಲ್ಲಿ ಬಂದು ಇದ್ದೆವು ಎಂದರೆ ಸಾಕ್ಷಿ ದಾವಣಗೆರೆಗೆ ಬಂದಿದ್ದೆವು ಆದರೆ ಅಲ್ಲಿಯೇ ಒಂದು ಬಿಜಿನೆಸ ಪ್ರಾರಂಬ ಮಾಡೋಣ ಎಂದು ಬಂದಿದ್ದೆವು ಎನ್ನುತ್ತಾರೆ. ದಾವಣಗೇರಿಯಲ್ಲಿ ಯಾವ ಬಿಜಿನೆಸ ಮಾಡಿದಿರಿ ಎಂದರೆ ಸಾಕ್ಷಿ ಅಲ್ಲಿ ನಮಗೆ ಸರಿ ಹೋಗಲಿಲ್ಲ ಆ ಕಾರಣಕ್ಕೆ ಮತ್ತೇ ಬೆಂಗಳೂರಿಗೆ ಹೋದೆವು ಎನ್ನುತ್ತಾರೆ.

ಡಾವಣಗೇರಿಯಲ್ಲಿದ್ದಾಗ ನಮ್ಮ ಆರ್ಥಿಕ ಪರಿಸ್ದಿತಿ ಸರಿ ಇರಲಿಲ್ಲ ಆ ಕಾರಣಕ್ಕೆ ನಾವು ಅಲ್ಲಿ ಬಿಜಿಜೆಸ ಮಾಡಲು ಆಗಲಿಲ್ಲ ಎಂದರೆ ಸಾಕ್ಷಿ ನಾವು ಚೆನ್ನಾಗಿಯೇ ಇದ್ದೆವು ಎನ್ನುತ್ತಾರೆ. ದಾವಣಗೆರೆಯಲ್ಲಿದ್ದಾಗ ನನ್ನ ಅಣ್ಣಂದಿರು ಹಣದ ಸಹಾಯ ಮಾಡಿ ಮತ್ತೇ ಬೆಂಗಳೂರಿಗೆ ಹೋಗುವಂತೆ ಮಾಡಿದರು ಎಂದರೆ ಸಾಕ್ಷಿ ಅದು ಸರಿಯಲ್ಲ ಎನ್ನುತ್ತಾರೆ. ಕ್ರೆಡಿಟ ಕಾರ್ಡ ಸಾಲ ತೀರಿಸದಿದ್ದಕ್ಕೆ ಹಾಗೂ ಬೆಂಗಳೂರಿನಲ್ಲಿ ನಮಗೆ ವಾಸಿಸಲು ಆಗದಿದ್ದಕ್ಕೆ ಮತ್ತೇ ಹುಬ್ಬಳ್ಳಿಗೆ ಬಂದು ಸೇರಿದೆವು ಎಂದರೆ ಸಾಕ್ಷಿ ಹಾಗೇನೂ ಇಲ್ಲ ಎನ್ನುತ್ತಾರೆ. ನನ್ನ ಮದುವೆ ಎಂಗೇಜಮೆಂಟ ಹುಬ್ಬಳ್ಳಿ ಸ್ಟೇಶನ ರೋಡರಲ್ಲಿಯ ಪ್ರಕಾಶ ರೆಸ್ಟೋರೆಂಟ 2008 ರಲ್ಲಿ ನಡೆದಿತ್ತು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಎಂಗೇಜಮೆಂಟ ಖರ್ಚನ್ನು ನನ್ನ ಅಣ್ಣಂದಿರೇ ನೋಡಿಕೊಂಡಿರುತ್ತಾರೆಂದರೆ ಸಾಕ್ಷಿ ಅದನ್ನು ನನ್ನ ಮಾವ ಎಂ ಎಂ ಮೇಹರವಾಡೆ ರವರು ನೋಡಿಕೊಂಡಿದ್ದರು ಎನ್ನುತ್ತಾರೆ. ಸದರಿಯವರು ಖರ್ಚು ಮಾಡಿದ್ದನ್ನು ನನ್ನ ಅಣ್ಣಂದಿರು ಆತನಿಗೆ ವಾಪಸು ಮಾಡಿರುತ್ತಾರೆಂದರೆ ಸಾಕ್ಷಿ ನನಗೆ ಅದು ಗೊತ್ತಿಲ್ಲ ಎನ್ನುತ್ತಾರೆ. ಆ ಖರ್ಚುನ್ನು ನಾನು ವಾಪಸು ಕೊಟ್ಟಿಲ್ಲ ಎಂದರೆ ಸರಿ. ನನ್ನ ಮಗಳ ಹೆಸರು ಖುಷಿ ಎಂದರೆ ಸರಿ. ಆಕೆಯ ಮೊದಲನೆ ಕಾರ್ಯಕ್ರಮ ಅವರ ಅಜ್ಜಿಯ ಮನೆ ಎಂದರೆ ನಿಮ್ಮ ಅಮ್ಮನ ಮನೆಯಲ್ಲಿ ಆಯಿತು ಎಂದರೆ ಸರಿ. ಬಹಳ ಮಂದಿ ಆ ಕಾರ್ಯಕ್ರಮಕ್ಕೆ ಬಂದಿದ್ದರು ಎಂದರೆ ಸಾಕ್ಷಿ ಕೇವಲ 10 ಮಂದಿ ಬಂದಿದ್ದರು ಎನ್ನುತ್ತಾರೆ. ವಾದಿ ನಂ.1 ರವರ ಮದುವೆ 1996 ನೇ ಸಾಲಿನಲ್ಲಿ ನಡೆದಿರುತ್ತದೆಂದರೆ ಸರಿ. ಸದರಿಯವರನ್ನು ಪಾಟೀಲ ಎಂಬ ಮನೆತನಕ್ಕೆ ಕೊಟ್ಟಿದ್ದು ಆ ಮನೆತನ ಹುಬ್ಬಳ್ಳಿಯಲ್ಲಿ ಒಂದು ಪ್ರತಿಷ್ಠಿತ ಮನೆತನ ಎಂದರೆ ಸರಿ. ಆ ಸಮಯದಲ್ಲಿ ಎಂಗೇಜಮೆಂಟ ಅರ್ದ ಖರ್ಚನ್ನು ಗಂಡನ ಮನೆಯವರು ಹಾಗೂ ಉಳಿದಿದ್ದನ್ನು ಎಂ ಎಂ ಮೇಹರವಾಡೆ ರವರು ಕೊಟ್ಟಿರುತ್ತಾರೆಂದರೆ ಸಾಕ್ಷಿ ನಮ್ಮ ಅಕ್ಕನ ಗಂಡನ ಮನೆಯವರು ಮಾಡಿಕೊಂಡಿದ್ದಾರೆ ಎನ್ನುತ್ತಾರೆ. 1 ನೇ ವಾದಿಯ ಗಂಡನ ಮನೆಯವರು ಮಾರುತಿ ಮೆಟಲ್ಸ ಎಂಬ ಬಾಂಡೆ ಸಾಮಾನಿನ ಅಂಗಡಿ ಇಟ್ಟಿದ್ದರು. ಅದಕ್ಕಿಂತ ಮೊದಲು ಅವರದು ಮತ್ತೊಂದು ಬಾಂಡೇ ಸಾಮಾನಿನ ಅಂಗಡಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಮೊದಲಿದ್ದ ಬಾಂಡೆ ಸಾಮಾನಿನ ಅಂಗಡಿ ಲುಕ್ಸಾನ ಅಗಿದ್ದಕ್ಕೆ ಅದನ್ನು ಅವರು ಬಂದು ಮಾಡಿದ್ದರೆಂದರೆ ನನಗೆ ಗೊತ್ತಿಲ್ಲ. ನಿಮ್ಮ ಅಕ್ಕನ ಪರವಾಗಿ ಎಲ್ಲಾ ವಿಷಯ ತಿಳಿದುಕೊಂಡು ಹೇಳುತ್ತಿದ್ದೀರೋ ಇಲ್ಲವೋ ಎಂದರೆ ಸಾಕ್ಷಿ ಅಕ್ಕನ ವಿಷಯ ಗೊತ್ತು ಆದರೆ ಬಾಂಡೇ ಸಾಮಾನಿನ ಅಂಗಡಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಮಾರುತಿ ಮೆಟಲ್ಸ ಎಂಬ ಅಂಗಡಿಯನ್ನು ನನ್ನ ಅಕ್ಕ ಮದುವೆಯಾದ ನಂತರ ಪ್ರಾರಂಬ ಮಾಡಿದ್ದು ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

**1 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**